**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಓಎಸ್ 131/2018**

ಡಿ.ಡಬ್ಲ್ಯೂ-4

**ದಿನಾಂಕ 21/04/2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಃ ಪ್ರತಿವಾದಿ ಪರ ವಕೀಲರುಃ**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ಸಂಗತಿಗಳು ನನಗೆ ತಿಳಿದಿದ್ದು ಹಾಗೂ ಅವು ಸತ್ಯವಾಗಿರುತ್ತವೆ.

**ಪಾಟಿ ಸವಾಲುಃ ವಾದಿ ಪರ ವಕೀಲರುಃ**

ನಾನು ಸಾಲುಕೊಪ್ಪಲು ಗ್ರಾಮದವನು, ಸಣ್ಣಮಲ್ಲೇಗೌಡರು ಕಾಳಮ್ಮನಕೊಪ್ಪಲು ಗ್ರಾಮದವರು. ಸಣ್ಣಮಲ್ಲೇಗೌಡರ ಮೊದಲ ಪತ್ನಿ ಪುಟ್ಟಮ್ಮ. ಜಯಮ್ಮ ರವರು ಸಣ್ಣಮಲ್ಲೇಗೌಡರು ಮತ್ತು ಪುಟ್ಟಮ್ಮ ರವರ ಮಗಳು ಎಂದರೆ ಸರಿ. ಸಣ್ಣಮಲ್ಲೇಗೌಡರು, ಪುಟ್ಟಮ್ಮ ಮತ್ತು ಮಾಯಮ್ಮ ಎಲ್ಲರೂ ಜಂಟಿ ಕುಟುಂಬಸ್ಥರು ಎಂದರೆ ಸರಿ. ಸಣ್ಣಮಲ್ಲೇಗೌಡರಿಗೆ ಯಾವ ಯಾವ ಸರ್ವೇ ನಂಬರ್ ನಲ್ಲಿ ಎಷ್ಟು ಜಮೀನುಗಳು ಇವೆ ಎಂದು ನನಗೆ ಗೊತ್ತಿಲ್ಲ. ಸಣ್ಣಮಲ್ಲೇಗೌಡರು ತಮ್ಮ ಜಿವಿತ ದ ಕಾಲದಲ್ಲಿ ಯಾವೆಲ್ಲಾ ಸ್ವತ್ತುಗಳನ್ನು ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಆದರೆ ಒಂದು ಸ್ವತ್ತಿನ ಬಗ್ಗೆ ನನಗೆ ಗೊತ್ತಿದೆ. ಸದರಿ ಜಮೀನಿನ ಸರ್ವೇ ನಂಬರ್ 74 ಅದನ್ನು ಖರೀದಿ ಮಾಡಿರುತ್ತಾರೆ. ಸದರಿ ಜಮೀನು ಬಕರೆ ಹಳ್ಳದಲ್ಲಿದೆ. ನನಗೆ ಸದರಿ ಸ್ವತ್ತನ್ನು ಯಾವ ದಿನಾಂಕದಂದು ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಸದರಿ ಕ್ರಯದ ಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿಲ್ಲ. ಮಾಯಮ್ಮನ ತಂದೆಯವರ ಆಸ್ತಿಯನ್ನು ಮಾರಾಟ ಮಾಡಿ ಜಮೀನನ್ನು ಖರೀದಿ ಮಾಡಿರುವ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ಸದರಿ ಜಮೀನನ್ನು ಕ್ರಯಕ್ಕೆ ಪಡೆದಾಗ ಸಣ್ಣಮಲ್ಲೇಗೌಡರು, ಪುಟ್ಟಮ್ಮ ಮತ್ತು ಮಾಯಮ್ಮ ಎಲ್ಲರೂ ಒಂದೇ ಕುಟುಂಬದಲ್ಲಿ ಇದ್ದರು ಎಂದರೆ, ಮೊದಲನೇ ಹೆಂಡತಿ ಪುಟ್ಟಮ್ಮ ರವರು ಎರಡೂ ಕಡೆ ಇರುತ್ತಿದ್ದರು ಎಂದು ತಿಳಿಸಿರುತ್ತಾರೆ.

2. ಸಣ್ಣಮಲ್ಲೇಗೌಡರು ಯಾವುದೇ ಸ್ವತ್ತುಗಳನ್ನು ತಾವು ಜೀವಂತವಾಗಿ ಇದ್ದಾಗ ವಿಭಾಗ ಮಾಡಿಕೊಟ್ಟಿರುವುದಿಲ್ಲ. ಬಕರೆ ಹಳ್ಳದ ಜಮೀನನ್ನು ಸಣ್ಣಮಲ್ಲೇಗೌಡರು ಮರಣ ಹೊಂದುವ ಪೂರ್ವದಲ್ಲಿ ಯಾವುದಾದರೂ ಕ್ರಯಪತ್ರ, ದಾನ, ಮರಣ ಶಾಸನ ಪತ್ರ ಅಥವಾ ಇನ್ನಿತರ ಯಾವುದೇ ರೀತಿಯ ಸ್ವತ್ತನ್ನು ಬಿಡುಗಡೆ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳಲ್ಲಿ ವಾದಿಗಳಿಗೆ ಬರುವಷ್ಟೆ ಸಮನಾದ ಭಾಗಾಂಶವು ಪ್ರತಿವಾದಿಗಳಿಗೂ ಬರಬೇಕಾಗುತ್ತದೆ ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ, ನ್ಯಾಯಾಲಯವೇ ತೀರ್ಮಾನ ಮಾಡಬೇಕು. ಬಕರೆ ಹಳ್ಳದ ಸ್ವತ್ತು ಯಾರ ಹೆಸರಿನಲ್ಲಿ ಖಾತೆಯಾಗಿದೆ ಎಂದು ನನಗೆ ಗೊತ್ತಿಲ್ಲ. ಬಕರೆ ಹಳ್ಳದ ಸ್ವತ್ತನ್ನು ಹೊರತು ಪಡಿಸಿ ಸಣ್ಣ ಮಲ್ಲೇಗೌಡರಿಗೆ ಇನ್ನು ಹಲವಾರು ಸ್ವತ್ತುಗಳು ಇವೆ ಎಂದರೆ ಸರಿ. ಸದರಿ ಇತರೆ ಸ್ವತ್ತುಗಳಿಂದ ಬಂದ ಆದಾಯದಿಂದ ಮತ್ತು ವರಮಾನದಿಂದ ಸಣ್ಣ ಮಲ್ಲೇಗೌಡರು ಬಕರೆ ಹಳ್ಳದ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮಾಯಮ್ಮ ರವರಿಗೆ ಸೇರಿದ ಸ್ವತ್ತನ್ನು ಮಾರಾಟ ಮಾಡಿ ಸದರಿ ಬಕರೆ ಹಳ್ಳದ ಸ್ವತ್ತನ್ನು ಖರೀದಿ ಮಾಡಿರುತ್ತಾರೆ. ಬಕರೆ ಹಳ್ಳದ ಸ್ವತ್ತು ಹಾಗೂ ಇತರೆ ಎಲ್ಲಾ ಸ್ವತ್ತುಗಳಲ್ಲಿ ವಾದಿಗಳಿಗೂ ಭಾಗಾಂಶ ಬರಬೇಕಾಗುತ್ತದೆ ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ, ನ್ಯಾಯಾಲಯವೇ ತೀರ್ಮಾನ ಮಾಡಬೇಕು.

**ಮರುವಿಚಾರಣೆ ಇರುವುದಿಲ್ಲಃ**

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ